ಪುಸ್ತಕಗಳು ಸೋತು ಹೋದವೆಂಬ ಭಾವವೇ ಮನಸ್ಸಿನಿಂದ ಕ್ರಮೇಣ ಮೆದುಳನ್ನು ಆವರಿಸುತ್ತ ಬಂದು ದೃಷ್ಟಿ ಮಂದವಾಗಿ ಇಡೀ ಕೋಣೆಯ ತುಂಬ ಕತ್ತಲು ತುಂಬಿಕೊಂಡಂತಾಗಿ ಎಲ್ಲವೂ ಅಯೋಮಯ ಅಗೋಚರ ಎನಿಸಲಾರಂಭಿಸಿತು. ಆಫೀಸಿನಲ್ಲಿ ಶೇಷಗಿರಿ ಪುರೋಹಿತನನ್ನು ನೋಡಿದ್ದೆ ಹೇಸಿಗೆ ಕಂಡಂತಾಗಿ ಹೊಟ್ಟೆ ತೊಳಿಸದಂತಾದ ಅನುಭವಕ್ಕೆ ಒಳಗಾಗಿ ಹೀಗೆ ಮನುಷ್ಯನನ್ನು ನೋಡಿ ತನ್ನಲ್ಲಿ ಮೂಡಿದ ಮೊದಲ ಭಾವವಿದು ಎನ್ನುವ ಯೋಚನೆ ಬಂದಿದ್ದೆ ಪ್ರೇಮಚಂದ ತನಗಾದ ಅನುಭವಕ್ಕೆ ತಾನೆ ಬೆಚ್ಚಿಬಿದ್ದ. ಶೇಷಗಿರಿ ಪುರೋಹಿತ ಸಮಾಧಾನ ಪಡಿಸುವಂತೆ ಹತ್ತಿರ ಬಂದು 'ಅಲ್ಲಯ್ಯಾ ಪ್ರೇಮಚಂದ ನಿನ್ನ ಹೆಸರಿನದೇ ದೊಡ್ಡ ಸಮಸ್ಯೆ ನೋಡು. ನೀನು ನಮ್ಮ ಸಮುದಾಯದವನೇ ಅಲ್ಲ ಅಂತ ಮಠದವರು ವಾದ ಮಾಡಿದ್ರು. ನಾನು ಎಷ್ಟು ಹೇಳಿದ್ರೂ ಕೇಳಲಿಲ್ಲ. ಪ್ರೇಮಚಂದ, ರೂಪಚಂದ, ಗುಲಾಬಚಂದ ಇಂಥ ಹೆಸರೆಲ್ಲ ಇರ್ತಾವೆನಯ್ಯ ನಮ್ಮಲ್ಲಿ. ನಿನ್ನಪ್ಪ ನಿನಗ ಅದ್ಯಾರೋ ಕಥಿ ಬರೆದವನ ಹೆಸರಿಟ್ಟು ಕುಲಗೆಡಿಸಿಬಿಟ್ಟ. ಇನ್ನು ಮುಖ ನೋಡಿದ್ರೆ ಅಲ್ಲಿ ನಿರ್ಲಿಪ್ತತೆ, ನಿರ್ಭಾವುಕತೆ ಬಿಟ್ರೆ ಬೇರೆ ಏನಿದೆ. ನಿನ್ನ ಹೆಸರು ನಿನ್ನ ಚಹರೆ ಸಮುದಾಯದೊಂದಿಗೆ ಸ್ವಲ್ಪನೂ ಮ್ಯಾಚ್ ಆಗ್ತಿಲ್ಲ. ಏನೂ ಬೇಜಾರು ಮಾಡ್ಕೊಬೇಡ ಮುಂದಿನ ವರ್ಷ ಪ್ರಯತ್ನಿಸಿದರಾಯ್ತು' ಎಂದು ಸಹಜವೆಂಬಂತೆ ಹೇಳಿ ಹೋಗಿದ್ದ.



**ಉಪಸಂಹಾರ:**

ಈಗ ಪ್ರೇಮಚಂದ ಗಲಗಲಿ ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ತನ್ನ ಮುಖದ ಚಹರೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಪ್ರಯತ್ನದ ಮೊದಲ ಹಂತವಾಗಿ ಅವನ ಮನೆಯಲ್ಲಿ ವ್ಯಕ್ತಿತ್ವ ವಿಕಾಸದ ಪುಸ್ತಕಗಳ ಗುಡ್ಡೆ ಬಿದ್ದಿದೆ. ಕಾರಂತ, ಭೈರಪ್ಪ, ಚಿತ್ತಾಲರ ಪುಸ್ತಕಗಳನ್ನೆಲ್ಲ ಗಂಟುಕಟ್ಟಿ ಅಟ್ಟದಲ್ಲಿಟ್ಟು ಈಗ ಬರೇ ವ್ಯಕ್ತಿತ್ವ ವಿಕಸನದ ಪುಸ್ತಕಗಳ ಮಧ್ಯೆ ಹುದುಗಿ ಹೋಗಿರುವನು. ಆನ್‌ಲೈನ್‌ನಲ್ಲಿ ಬದುಕುವುದು ಹೇಗೆಂಬ ಉಪನ್ಯಾಸ ಗಂಟೆಗಟ್ಟಲೆ ಆಲಿಸುತ್ತಾನೆ. ಆಗಾಗ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ವ್ಯಕ್ತಿತ್ವ ವಿಕಸನದ ಶಿಬಿರಗಳಿಗೆ ಹಾಜರಾಗುತ್ತಾನೆ. ಪ್ರತಿಮುಂಜಾನೆ ಕಾಲೋನಿಯ ಗಾರ್ಡನ್‌ನಲ್ಲಿ ಸೇರಿ ಹೋ ಹೋ ಎಂದು ನಗುವ ಜನರ ಮಧ್ಯೆ ಸೇರಿ ತಾನೂ ನಗಲು ಪ್ರಯತ್ನಿಸುತ್ತಾನೆ. ಬೆಳಗ್ಗೆ ನಿದ್ದೆಯಿಂದ ಎಚ್ಚೆತ್ತವನೇ ಅಲ್ಮೆರಾದ ಬಾಗಿಲಿಗೆ ಅಂಟಿಸಿರುವ ಆಳೆತ್ತರದ ನಿಲುವುಗನ್ನಡಿ ಎದುರು ನಿಂತು ತನ್ನ ಮುಖದಲ್ಲಿ ಹೊಸ ಚಹರೆಯೇನಾದರೂ ಆವಿರ್ಭವಿಸುತ್ತಿದೆಯೇ ಎಂದು ಆ ಒಂದು ದಿವ್ಯ ಕ್ಷಣಕ್ಕಾಗಿ ಕಾದವನಂತೆ ಕಾತರದಿಂದ ನೋಡಿಕೊಳ್ಳುತ್ತಾನೆ. ಮುಂದೊಂದುದಿನ ಬದಲಾದ ಮುಖಚಹರೆಯ ಪ್ರೇಮಚಂದ ನಿಮಗೆ ದಾರಿಯಲ್ಲಿ ಎದುರಾದರೂ ಎದುರಾಗಬಹುದು. ನಾನೂ ಅವನಿಗಾಗಿ ಕಾಯುತ್ತಿದ್ದೇನೆ.

## ರಾಜಕುಮಾರ ವ್ಹಿ. ಕುಲಕರ್ಣಿ

ಕಲಬುರಗಿ ತಾಲ್ಲೂಕಿನ ಕುಮಸಿಯವರು. ಪ್ರಸ್ತುತ ಅವರು ಬಾಗಲಕೋಟೆಯ ಬಿ.ವಿ.ವಿ. ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರಾಗಿದ್ದರು. 'ಸಾಧನೆ', 'ಪೂರ್ಣ ಸತ್ಯ', 'ಮನದ ಮಾತು', 'ಅನಾವರಣ', 'ಅನ್ವೇಷಣೆ', 'ಬೊಗಸೆಯಲ್ಲಿ ಕಡಲು', 'ಭಾವಭಿತ್ತಿ' ಮತ್ತು 'ಹೆಜ್ಜೆ ಮೂಡಿದ ಹಾದಿ' ಎಂಬ ಲೇಖನಗಳ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಪತ್ರಿಕೆಗಳಲ್ಲಿ ಕೆಲವು ಕತೆಗಳು ಪ್ರಕಟವಾಗಿವೆ.